# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1404
ಮಾನ್ಯ ಸದಸ್ಯರ ಹೆಸರು : ಶ್ರೀ ಹೆಚ್.ಪಿ. ಸುಧಾಮ್ ದಾಸ್(ನಾಮನಿರ್ದೇಶಿತರು)
ಉತ್ತರಿಸಬೇಕಾದ ದಿನಾಂಕ : 20.03.2025
ಉತ್ತರಿಸುವವರು : ಮುಖ್ಯಮಂತ್ರಿಯವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸರ್ಕಾರಿ ನೌಕರರ ಪೈಕಿ "ಎ" ಹಾಗೂ "ಬಿ" ವೃಂದಕ್ಕೆ ಸೇರಿದ ಎಷ್ಟು ಮಂದಿ ಅಧಿಕಾರಿಗಳು ದಿನಾಂಕ:01.02.2025ರ ದಿನಾಂಕದ ಅನುಸಾರ ಸ್ಥಳ ನಿರೀಕ್ಷಣೆಯಲ್ಲಿರುತ್ತಾರೆ: ಸರ್ಕಾರದ ಎಲ್ಲಾ ಇಲಾಖೆಯ ಸ್ಥಳ ನಿರೀಕ್ಷಣೆಯಲ್ಲಿರುವ ಅಧಿಕಾರಿಗಳ ವಿವರ ಒದಗಿಸುವುದು: ಈ ಸ್ಥಳ ನಿರೀಕ್ಷಣೆಯಲ್ಲಿರುವ ಅಧಿಕಾರಿಗಳಿಗೆ ಸರ್ಕಾರದ ಬೊಕ್ಕಸದಿಂದ ಪ್ರತಿ ತಿಂಗಳು ನೀಡಲಾಗುತ್ತಿರುವ ವೇತನದ ಒಟ್ಟು ಮೊತ್ತ ಎಷ್ಟು? (ವಿವರ ಒದಗಿಸುವುದು) | ಒಂದು ಇಲಾಖೆಯಲ್ಲಿ ಎರಡು ಸಂದರ್ಭಗಳಲ್ಲಿ ಸ್ಥಳನಿಯುಕ್ತಿಗಾಗಿ ಅಧಿಕಾರಿ / ನೌಕರರು ಕಾಯುವ ಪ್ರಮೇಯ ಉದ್ಭವಿಸುತ್ತದೆ.<br><br>1. ವರ್ಗಾವಣೆಗೊಂಡ / ನಿಯೋಜನೆಗೊಂಡ ಇತರೆ ಇಲಾಖೆಯ ಉದ್ಯೋಗಿಯು ಮತ್ತೊಂದು ಇಲಾಖೆಯಲ್ಲಿ ವರ್ಗಾಯಿಸಲಾದ / ನಿಯೋಜಿಸಲಾದ ಹುದ್ದೆಯಲ್ಲಿ ಕಾರ್ಯವರದಿ ಮಾಡಿಕೊಂಡು ಮರುಸ್ಥಳನಿಯುಕ್ತಿ ಆದೇಶಕ್ಕಾಗಿ ಕಾಯುತ್ತಿರುವಾಗ.<br><br>2. ಅದೇ ಇಲಾಖೆಯಲ್ಲಿ ಕೆಲವು ಆಡಳಿತಾತ್ಮಕ ಅಗತ್ಯತೆಯಿಂದಾಗಿ ಅಧಿಕಾರಿ / ನೌಕರರ ಸ್ಥಳ ನಿಯುಕ್ತಿಗಾಗಿ ಕಾಯುತ್ತಿರುವಾಗ.<br><br>ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸ್ಥಳ ನಿಯುಕ್ತಿಗಾಗಿ ಕಾಯುವಿಕೆಯಲ್ಲಿರುವ ಅಧಿಕಾರಿ / ನೌಕರರಿಗೆ ಪ್ರತಿ ದಿನ ಸ್ಥಳ ನಿಯುಕ್ತಿ ಆದೇಶಗಳನ್ನು ಹೊರಡಿಸಲಾಗುತ್ತದೆ ಸ್ಥಳ ನಿಯುಕ್ತಿಗಾಗಿ ಕಾಯುವಿಕೆಯಲ್ಲಿರುವ ಅಧಿಕಾರಿ / ನೌಕರರ ಮಾಹಿತಿಯು ದಿನದಿನೇ ಬದಲಾವಣೆಯಾಗಲಿದ್ದು, ಮಾಹಿತಿಯು ಸ್ಥಿರವಾಗಿಲ್ಲದೇ ಇರುವುದರಿಂದ ಇಲಾಖೆಗಳು ಸ್ಥಳ ನಿಯುಕ್ತಿಗಾಗಿ ಕಾಯುವಿಕೆಯಲ್ಲಿರುವ ಅಧಿಕಾರಿ / ನೌಕರರ ನಿರ್ದಿಷ್ಟ ಮಾಹಿತಿಯನ್ನು ಒದಗಿಸಲು ಸಾಧ್ಯವಿಲ್ಲ. ಮರುಸ್ಥಳ ನಿಯುಕ್ತಿಗಾಗಿ ಕಾಯುವ ಸಂದರ್ಭವು ತಾತ್ಕಾಲಿಕ ಹಂತದ್ದಾಗಿದ್ದು, ಅಧಿಕಾರಿ / ನೌಕರರುಗಳನ್ನು ಅಲ್ಪಾವಧಿಯಲ್ಲಿಯೇ ಮರುಸ್ಥಳನಿಯುಕ್ತಿಗೊಳಿಸಲಾಗುತ್ತದೆ. |

**ಕಡತ ಸಂಖ್ಯೆ: ಸಿಆಸುಇ 95 ರಾಸ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ